# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)

**ಹೆಚ್.ಪಿ. ಪ್ರಕಾಶ್,** ಭಾ.ಅ.ಸೇ.
ವ್ಯವಸ್ಥಾಪಕ ನಿರ್ದೇಶಕರು

**ಅ.ಸ. ಪತ್ರ ಸಂ:ಕೆಆರ್‌ಐಡಿಎಲ್/ಕಾಮಗಾರಿ/ಗುಣನಿಯಂತ್ರಣ/2013-14** **ದಿನಾಂಕ:01-03-2014**

ಪ್ರಿಯ ಶ್ರೀ

**ವಿಷಯ:** ನಿಗಮದ ವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಮೂರೂ ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂ:ಗ್ರಾಅಪ:01:ಸುಗ್ರಾಯೋ:2014 (ಕೆಆರ್‌ಐಡಿಎಲ್) ದಿ.06-01-2014.
2. ಪ್ರಧಾನ ಕಛೇರಿಯ ಪತ್ರ ಸಂ:ಕೆಎಲ್‌ಎಸಿ/ವರ್ಕ್ಸ್/ಕ್ಯೂಸಿ/2007-08 ದಿನಾಂಕ 06-02-2008.

# # #

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ದಿನಾಂಕ 06-01-2014ರ ಅರೆ ಸರ್ಕಾರಿ ಪತ್ರದ ಮುಖೇನ ಸಂಸ್ಥೆಯು ರೂ.1.00 ಕೋಟಿ ಮೊತ್ತದವರೆವಿಗೆ ಕಾಮಗಾರಿಗಳ ವಹಿಸುವಿಕೆಗೆ ಕೆ.ಟಿ.ಪಿ.ಪಿ. ಅಧಿನಿಯಮದ ಸೆಕ್ಷನ್ 4ಜಿ ಅಡಿಯಲ್ಲಿ ವಿನಾಯತಿಯನ್ನು ಪಡೆದು ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಜನಪ್ರತಿನಿಧಿಗಳಿಂದ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಭಿಪ್ರಾಯಗಳು ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ, ಮೂರೂ ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. ಈ ಮಧ್ಯೆ ರಾಜ್ಯ ಸರ್ಕಾರವು ಅಧಿಸೂಚನೆ ಸಂ:ಅಇ:45:ವೆಚ್ಚ-12/14 ದಿನಾಂಕ 07-02-2014ರ ಮೂಲಕ ಕೆಟಿಪಿಪಿ ಅಧಿನಿಯಮ ಸೆಕ್ಷನ್ 4ಜಿ ಅಡಿಯಲ್ಲಿ ದಿನಾಂಕ 01-04-2014ರಿಂದ ಒಂದು ವರ್ಷದ ಅವಧಿಗೆ ರೂ.2.00 ಕೋಟಿ ಮಿತಿಯ ವರೆಗಿನ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ನೇರವಾಗಿ ವಹಿಸಲು ವಿನಾಯಿತಿ ನೀಡಿರುವುದರ ಬಗ್ಗೆ ಗಮನಸೆಳೆಯಲಾಗಿದೆ. ಮುಂದುವರೆದಂತೆ, ಕಾಮಗಾರಿಗಳ ಅನುಷ್ಠಾನ ಕುರಿತಂತೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮವು ಅಳವಡಿಸಿಕೊಂಡಿರುವ ಮೂರು ಸ್ಥರದ ಗುಣನಿಯಂತ್ರಣ ತನಿಖಾ ವ್ಯವಸ್ಥೆಯನ್ನು ಹಾಗೂ ಗುಣನಿಯಂತ್ರಣ ಪ್ರಯೋಗಾಲಯಗಳನ್ನು ಸಂಸ್ಥೆಯು ಕೂಡ ಅಳವಡಿಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ಅವಶ್ಯವಿರುವುದಾಗಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಸಂಸ್ಥೆಯ ಅಧ್ಯಕ್ಷರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ವಿಚಾರದಲ್ಲಿಯೇ ಪ್ರಧಾನ ಕಛೇರಿಯಿಂದ ಹಿಂದೆ ಹಲವಾರು ಸುತ್ತೋಲೆಗಳ ಮುಖೇನ ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳ ಗುಣಮಟ್ಟವನ್ನು 3 ನೇ ಸಂಸ್ಥೆಯಿಂದ ತಪಾಸಣೆ ಮಾಡಿಸುವುದು ಕಡ್ಡಾಯವೆಂದೂ ಹಾಗೂ ಕಾಮಗಾರಿಗಳ ಉತ್ತಮ ಮಟ್ಟವನ್ನು ಕಾಯ್ದುಕೊಳ್ಳಲು ಸೂಚಿಸಲಾಗಿದೆ.

ಕಛೇರಿ : 080 22879900
ಗ್ರಾಮೀಣಾಭಿವೃದ್ಧಿ ಭವನ,

ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ತಾಂತ್ರಿಕ ಕೌಶಲ್ಯತೆ ದಿನದಿನಕ್ಕೆ ಬೆಳವಣಿಗೆಯಾಗುತ್ತಿದ್ದು, ಸ್ಪರ್ಧಾತ್ಮಕತೆಯಿಂದ ಕೂಡಿರುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ವಿಷಯವು ಅತ್ಯಂತ ಸೂಕ್ಷ್ಮವಾದದ್ದಾಗಿದ್ದು, ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳಿಗೆ ಕೆಳಕಂಡಂತೆ ಮೂರು ಹಂತದ ಗುಣನಿಯಂತ್ರಣ ತನಿಖಾ ವ್ಯವಸ್ಥೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಷ್ಠಾನ ಮಾಡಲು ಸೂಚಿಸಲಾಗಿದೆ.

1. ಕಾಮಗಾರಿಯನ್ನು ನಿರ್ವಹಿಸುವ ಸ್ಥಳೀಯ ಅಧಿಕಾರಿಗಳು ಕಾಮಗಾರಿಗೆ ಬಳಸುವ ಕಟ್ಟಡ ಸಾಮಗ್ರಿಗಳ ಹಾಗೂ ಕಾರ್ಯಕೌಶಲ್ಯತೆಯು ನಿರ್ಧಿಷ್ಟಪಡಿಸಿರುವ ವಿಶಿಷ್ಟತೆಯಿಂದ ಕೂಡಿರುವುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.
2. ಜಿಲ್ಲಾಮಟ್ಟದಲ್ಲಿ ಗುಣನಿಯಂತ್ರಣ ವ್ಯವಸ್ಥೆಗೆ ಪರಿವೀಕ್ಷಕರ ತಂಡವನ್ನು ಸಂಸ್ಥೆಯಲ್ಲಿ ರಚಿಸಿಕೊಂಡು, ಅವರುಗಳು ಕಾಮಗಾರಿಗಳ ಪರಿವೀಕ್ಷಣೆಗೆ ಬೇಕಾದ ವರದಿಗಳನ್ನು ಸಲ್ಲಿಸುವುದು ಮತ್ತು ಜಿಲ್ಲಾ ತಂಡದ ಗುಣ ನಿಯಂತ್ರಕರಿಗೆ ಅವಶ್ಯಕ ಮಾಹಿತಿಯನ್ನು ಪೂರೈಸಲು ಸಮನ್ವಯ ರೂಢಿಸಿಕೊಳ್ಳುವಂತೆ ಸೂಚಿಸಲಾಗಿದೆ.
3. ಗುಣನಿಯಂತ್ರಣ ವ್ಯವಸ್ಥೆಗೆ ರಾಜ್ಯ ಮಟ್ಟದ ತಂಡವನ್ನು ಮಾನ್ಯ ಅಪರ ಕಾರ್ಯದರ್ಶಿಗಳು, ಗ್ರಾ.ಪಂ. ಇಲಾಖೆ ಇವರು ನೇಮಿಸಲಿದ್ದು, ಸದರಿ ತಂಡವು ಗ್ರಾ.ಮತ್ತು ಪಂ.ರಾಜ್ ಇಲಾಖೆಯ ಮಾರ್ಗ ಸೂಚಿಯಂತೆ ಕಾಮಗಾರಿಗಳ ಪರಿವೀಕ್ಷಣೆಯನ್ನು ನಡೆಸಲಿದ್ದಾರೆ.

ಪ್ರಾಜೆಕ್ಟ್ ಅಧಿಕಾರಿಗಳಿಗೆ "Hand feel test" ಮತ್ತು "Laboratory test" ನಡೆಸಲು ಗುಣನಿಯಂತ್ರಣ ವ್ಯವಸ್ಥೆಯ ಕೈಪಿಡಿಯನ್ನು ಮಾಹಿತಿಗೆ ಲಗತ್ತಿಸಿದೆ. ಪ್ರಾಜೆಕ್ಟ್ ಅಧಿಕಾರಿಗಳು ಕಾಮಗಾರಿಗಳಿಗೆ ಕಟ್ಟಡ ಸಾಮಗ್ರಿ ಉಪಯೋಗಿಸುವುದಕ್ಕೆ ಮುಂಚೆ ಗುಣ ನಿಯಂತ್ರಣ ಪರೀಕ್ಷೆ ಮಾಡಲು ಅವಶ್ಯಕವಿರುವ ಪ್ರಪತ್ರವನ್ನು ಲಗತ್ತಿಸಿದೆ, ಈ ಪ್ರಕ್ರಿಯೆ ಪ್ರಾಜೆಕ್ಟ್ ಅಧಿಕಾರಿಗಳು ಅನುಸರಿಸಿದ ನಂತರ ಸಂಭಂಧಿಸಿದ ಕಾಮಗಾರಿಯ ಲೆಕ್ಕಪತ್ರದೊಂದಿಗೆ ಪ್ರಪತ್ರವನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಕಟ್ಟಡ ಸಾಮಗ್ರಿಗಳ ಪರೀಕ್ಷೆಗೆ ಪ್ರಾಜೆಕ್ಟ್ ಹಂತದಲ್ಲಿ ಅವಶ್ಯವಿರುವ ಉಪಕರಣಗಳ ಪಟ್ಟಿಯೊಂದನ್ನು ಸಹ ಲಗತ್ತಿಸಿದ್ದು, ಇವುಗಳನ್ನು ಪ್ರಾಜೆಕ್ಟ್ ಹಂತದಲ್ಲಿ ಗುಣನಿಯಂತ್ರಣಾ ಪರೀಕ್ಷೆಗೆ ಇಡತಕ್ಕದ್ದು. ಗುಣನಿಯಂತ್ರಣ ಕೈಪಿಡಿ ಮತ್ತು ನಮೂನೆಗಳು ಕೆಆರ್‌ಐಡಿಎಲ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಗುಣನಿಯಂತ್ರಣ ಪರೀಕ್ಷೆಯ ವರದಿಗಳನ್ನು ವರ್ಕ್ ಸಾಫ್ಟ್‌ನಲ್ಲೂ ಸಹ ಹಾಕಲು ಸೂಚಿಸಲಾಗಿದೆ.

ಎಲ್ಲಾ ಪ್ರಾಜೆಕ್ಟ್ ಅಧಿಕಾರಿಗಳು ಉತ್ತಮ ಗುಣಮಟ್ಟದ ಕಾಮಗಾರಿಯ ನಿರ್ವಹಣೆಯನ್ನು ಮಾಡುವುದು ಅವಶ್ಯಕ ಹಾಗೂ ಕಡ್ಡಾಯವಾಗಿರುತ್ತದೆ. ಹಾಗೆಯೇ ಗುಣನಿಯಂತ್ರಣಾ ಪರೀಕ್ಷೆಯ ವರದಿಗಳನ್ನು ಪ್ರಪತ್ರದಲ್ಲಿ ಭರ್ತಿ ಮಾಡಿ, ಕಾಲಕಾಲಕ್ಕೆ ಸಲ್ಲಿಸುವ ಲೆಕ್ಕಪತ್ರದೊಂದಿಗೆ ತಪ್ಪದೇ ಪ್ರಾಜೆಕ್ಟ್ ಅಧಿಕಾರಿಗಳು ಕಳುಹಿಸಲು ಸಹ ಆದೇಶಿಸಿದೆ.

ತಮ್ಮ ವಿಶ್ವಾಸಿ,